2653 (3277) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ):- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ಮತ ಕ್ಷೇತ್ರದಲ್ಲಿರುವ ಪಶು ಚಿಕಿತ್ಸಾಲಯಗಳಲ್ಲಿ ಪಶುವೈದ್ಯರು ಹಾಗೂ ಇತರೆ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ ಕೊರತೆ ಇರುವ ಸಿಬ್ಬಂದಿಯನ್ನು ತುಂಬಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಇ) ಶಿರಹಟ್ಟಿ ಮತ ಕ್ಷೇತ್ರ ಗ್ರಾಮಗಳಾದ ಕಡಕೂರು, ಬಾತಿಹೊಸೂರು, ಮಾಡಳ್ಳಿ, ಬಿಡನೆ ಬಿಟ್ಟೂರು ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ; ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಹೌದು.

ಆ) ಪಶುವೈದ್ಯಾಧಿಕಾರಿಗಳ ಖಾಲಿ ಹುದ್ದೆ ತುಂಬಲು 250 ಪಶುವೈದ್ಯರನ್ನು ವಿಶೇಷ ನೇರ ನೇಮಕಾತಿ ಅಡಿಯಲ್ಲಿ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಗುತ್ತಿಗೆ ಅಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯರ ಸೇವೆ ಸಕ್ರಮಗೊಳಿಸುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಪಶುವೈದ್ಯಕೀಯ ಮೇಲ್ವಿಚಾರಕರು ಹಾಗೂ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಡಿ ನೌಕರ ವೃಂದದಿಂದ ಸೂಕ್ತ ತರಬೇತಿ ನೀಡಿ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದು. ವಾಹನ ಚಾಲಕರ ಖಾಲಿ ಹುದ್ದೆಗಳನ್ನು ಭಾರಿ ವಾಹನ ಚಾಲನೆ ಪರವಾನಗಿ ಪಡೆದ 'ಡಿ' ದರ್ಜೆ ನೌಕರರಿಗೆ ಮುಂಬಡ್ತಿ ನೀಡಲು ಹಾಗೂ ಡಿ ದರ್ಜೆ ಖಾಲಿ ಹುದ್ದೆಗಳನ್ನು ಅನುಕಂಪದ ಆಧಾರದ ಮೇರೆಗೆ ಹಾಗೂ ಇತರೆ ಇಲಾಖೆಗಳಿಂದ ಮರು ವಿನ್ಯಾಸ ಮೂಲಕ ಭರ್ತಿ ಮಾಡಲಾಗುವುದು.

ಇ) ಹೊಸ ಪಶು ಚಿಕಿತ್ಸಾಲಯಗಳನ್ನು ಮಂಜೂರು ಮಾಡುವ ಕಾರ್ಯಕ್ರಮ ಪ್ರಸ್ತುತ ರಾಜ್ಯದಲ್ಲಿ ಇರುವುದಿಲ್ಲ. ಅದಾಗ್ಯೂ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಡಾ॥ ಡಿ.ಎಂ. ನಂಜುಡಪ್ಪನವರ ಸಮಿತಿಯ ಪ್ರಾದೇಶಿಕ ಅಸಮತೋಲನ ವರದಿಯಲ್ಲಿನ ಸಲಹೆಯಂತೆ

ಬಹಳ ಹಿಂದುಳಿದ 39 ತಾಲ್ಲೂಕುಗಳಲ್ಲಿ ಕೊರತೆ ಇರುವ ಕಡೆ ತೆರೆಯಲು ಪರಿಶೀಲಿಸಲಾಗುವುದು.

2654 (3424) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) :– ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಹಂಚಿನ ಉದ್ಯಮ ಸಂಕಷ್ಟದಲ್ಲಿರುವುದು ಮತ್ತು ಹಂಚುಗಳಿಗೆ ಬೇಡಿಕೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಲ್ಲಿ ಹಂಚಿನ ಉದ್ಯಮದ ಬದಲಿಗೆ ಉಡುಪಿ ಜಿಲ್ಲೆಯಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಯೋಚಿಸುತ್ತಿದೆ;

ಇ) ಯಾವ ಕೈಗಾರಿಕೆಗಳನ್ನು ಸ್ಥಾಪಿಸಲು ಸಮೀಕ್ಷೆ ನಡೆಸಲಾಗಿದೆ ಅವು ಯಾವುವು;

ಈ) ಯಾವಾಗ ಪ್ರಾರಂಭಿಸಲು ಉದ್ದೇಶಿಸಲಾಗಿದೆ;

ಉ) ಕೈಗಾರಿಕೆಗಳನ್ನು ಖಾಸಗಿ ಮತ್ತು ಸರ್ಕಾರ ಜಂಟಿಯಾಗಿ ಪ್ರಾರಂಭಿಸುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು) :

ಅ) – ಬಂದಿದೆ –

ಆ) ಹಂಚಿನ ಉದ್ಯಮಗಳಿಗೆ ಸಾಂಪ್ರದಾಯಿಕ ಹಂಚಿನ ಬದಲು ಡೆಕೋರೇಟೀವ್ ಟೈಲ್ಸ್, ಫ್ಲೋರಿಂಗ್ ಟೈಲ್ಸ್ ಉತ್ಪಾದನೆ ಮಾಡಲು ಸಲಹೆಗಳನ್ನು ನೀಡಲಾಗಿದೆ. ಈಗಾಗಲೇ ಕೆಲವು ಘಟಕಗಳು ಉತ್ಪಾದನೆಗಳನ್ನು ಬದಲಾಯಿಸಿ ಡೆಕೋರೇಟೀವ್ ಟೈಲ್ಸ್, ಫ್ಲೋರಿಂಗ್ ಟೈಲ್ಸ್ ಉತ್ಪಾದನೆ ಮಾಡುತ್ತಿದ್ದಾರೆ. ಬೃಹತ್ ಮತ್ತು ಮಧ್ಯಮ ಕ್ಷೇತ್ರದಲ್ಲಿ ಪ್ರವಾಸ್ಯೋದ್ಯಮ, ತೋಟಗಾರಿಕೆ, ಆಯುರ್ವೇದಿಕ್, ಸಾಫ್ಟ್‌ವೇರ್, ಬಯೋಟೆಕ್ನಾಲಜಿ, ಸಿದ್ಧ ಉಡುಪುಗಳು, ಅಟೋಮೊಬೈಲ್ ಬಿಡಿಭಾಗಗಳ ಜೋಡಣೆ ಮುಂತಾದ ಘಟಕಗಳ ಸ್ಥಾಪನೆಗೆ ವಿಪುಲ ಅವಕಾಶವಿರುತ್ತದೆ. ಕೈಗಾರಿಕೆಗಳನ್ನು ಸರ್ಕಾರ ನೇರವಾಗಿ ಸ್ಥಾಪಿಸುವುದಿಲ್ಲ. ಕೈಗಾರಿಕೆಗಳನ್ನು ಖಾಸಗಿ ವಲಯದಲ್ಲಿ ಸ್ಥಾಪಿಸಲಾಗುತ್ತದೆ. ಹೊಸದಾಗಿ ಸ್ಥಾಪಿಸಲ್ಪಡುವ ಕೈಗಾರಿಕೆಗಳಿಗೆ ಕೈಗಾರಿಕಾ ನೀತಿ 2001–2006 ರಂತೆ ಸರ್ಕಾರದಿಂದ ಉತ್ತೇಜನ ನೀಡಲಾಗುತ್ತದೆ.